ಗಣಿತದ ಮೋಜು 2





ಟಿ.ಕೆ ಝಿಕಾಲ್ಕಿನಾ

ಗಣಿತದ ಮೋಜು 2

ವಿವರಣೆ: ಬಿ. ರೈಟ್‌ಮನ್


Maths is fun 2

ಕನ್ನಡಕ್ಕೆ: ಪ್ರವೀಣ್ ಎಸ್, ಕೋಲಾರ

Prosveshcheniye Publishers
Moscow 1985



1. ಗುಣಾಕಾರ ಮತ್ತು ಭಾಗಾಕಾರ




1. ಒಂದು ಮರದ ಪ್ರತಿಯೊಂದು ಕೊಂಬೆಯ ಮೇಲೆ ಎರಡು ಮಂಗಗಳು ಕುಳಿತಿವೆ. ಎರಡು ಕೊಂಬೆಗಳ ಮೇಲೆ ಎಷ್ಟು ಮಂಗಗಳು ಕುಳಿತಿವೆ? ಸಂಕಲನ ಮಾಡಿ ಉತ್ತರ ಬರೆಯಿರಿ.

□ □ = □

2. ಸಮ ಸಂಖ್ಯೆಯ ವಸ್ತುಗಳನ್ನು ಬಳಸಿಕೊಂಡು ಮೊತ್ತವನ್ನು ರಚಿಸಿ:

2 + 2 + 2 + 2 + 2 + 2 + 2



= □

2 → 4 → 6 → 8 → 10 → 12 → 14

2 ರಿಂದ ಗುಣಿಸಿ / ಭಾಗಿಸಿ:

2 · 1 = 2	16 : 2
2 · 2	18 : 2
6 · 2	10 : 2
7 · 2	12 : 2


4. ಈ ಹುಡುಗ 9 ಜೀರುಂಡೆಗಳನ್ನು 3 ಪೆಟ್ಟಿಗೆಗಳಲ್ಲಿ ಸಮನಾಗಿ ಇರಿಸಿದ್ದಾನೆ. ಪ್ರತಿಯೊಂದು ಪೆಟ್ಟಿಗೆಯಲ್ಲಿ ಎಷ್ಟು ಜೀರುಂಡೆಗಳಿವೆ?



☐ ☐ = ☐

5. ಸಮ ಸಂಖ್ಯೆಯ ವಸ್ತುಗಳನ್ನು ಬಳಸಿಕೊಂಡು ಮೊತ್ತವನ್ನು ಕಂಡುಹಿಡಿಯಿರಿ:

3 + 3 + 3 + 3 + 3 + 3


 = ☐

3 → 6 → 9 → ☐ → ☐ → ☐

6. 3 ರಿಂದ ಗುಣಿಸಿ / ಭಾಗಿಸಿ.

3 • 2	5 • 3	21 : 3	9 : 3
3 • 3	6 • 3	24 : 3	12 : 3
3 • 4	7 • 3	27 : 3	15 : 3


7. ಪ್ರತಿಯೊಂದು ಅಕ್ವೇರಿಯಂನಲ್ಲಿ 4 ಮೀನುಗಳಿವೆ. ಎರಡು ಅಕ್ವೇರಿಯಂಗಳಲ್ಲಿ ಒಟ್ಟು ಎಷ್ಟು ಮೀನುಗಳಿವೆ?



☐ ☐ = ☐

8. ಸಮ ಸಂಖ್ಯೆಯ ವಸ್ತುಗಳನ್ನು ಬಳಸಿಕೊಂಡು ಮೊತ್ತವನ್ನು ಕಂಡುಹಿಡಿಯಿರಿ:

4 + 4 + 4 + 4 + 4 + 4

 = ☐

4 → 8 → 12 → ☐ → ☐ → ☐

9. 4 ರಿಂದ ಗುಣಿಸಿ / ಭಾಗಿಸಿ.


4 • 2	12 : 4
4 • 3	16 : 4
6 • 4	28 : 7
7 • 4	32 : 8

10. ಒಂದು ಹುಡುಗಿ 15 ಬಾಳೆಹಣ್ಣುಗಳನ್ನು 3 ತಟ್ಟೆಗಳಲ್ಲಿ ಸಮಾನವಾಗಿ ಹಂಚಿ ಇಟ್ಟಳು. ಆಗ ಪ್ರತಿ ತಟ್ಟೆಯಲ್ಲಿ ಎಷ್ಟು ಬಾಳೆಹಣ್ಣುಗಳಿರುತ್ತವೆ? □ □=□



11. ಸಮ ಸಂಖ್ಯೆಯ ವಸ್ತುಗಳನ್ನು ಬಳಸಿಕೊಂಡು ಮೊತ್ತವನ್ನು ಕಂಡುಹಿಡಿಯಿರಿ:

5 + 5 + □ + □ + □ + □




= □

5 → 10 → □ → □ → □ → □

12. 5 ರಿಂದ ಗುಣಿಸಿ / ಭಾಗಿಸಿ:

5 · 1	1 · 5	5 : 5	5 : 1
5 · 2	2 · 5	10 : 5	10 : 2


13. ಒಂದು ಫುಟ್ಬಾಲ್ ತಂಡದಲ್ಲಿ 6 ಹುಡುಗರಿದ್ದಾರೆ. ಎರಡು ತಂಡಗಳಲ್ಲಿ ಒಟ್ಟು ಎಷ್ಟು ಹುಡುಗರಿರುತ್ತಾರೆ?



14. ಸಮ ಸಂಖ್ಯೆಯ ವಸ್ತುಗಳನ್ನು ಬಳಸಿಕೊಂಡು ಮೊತ್ತವನ್ನು ಕಂಡುಹಿಡಿಯಿರಿ



6 + 6 + □ + □ + □ + □




= □

6 → 12 → □ → □ → □ → □

15. 6 ರಿಂದ ಗುಣಿಸಿ /ಭಾಗಿಸಿ:

6 · 1 =	1 · 6 =	6 : 6 =	6 : 1 =
6 · 2 =	2 · 6 =	12 : 6 =	12 : 2 =
6 · 3 =	3 · 6 =	18 : 6 =	18 : 3 =

16. ಒಂದು ಕಪಾಟು 7 ಹೂದಾನಿಗಳನ್ನು ಹೊಂದಿವೆ. ಮೂರು ಕಪಾಟುಗಳಲ್ಲಿ ಒಟ್ಟು ಎಷ್ಟು ಹೂದಾನಿಗಳಿವೆ?



□ □ = □

17. ಸಮ ಸಂಖ್ಯೆಯ ವಸ್ತುಗಳನ್ನು ಬಳಸಿಕೊಂಡು ಮೊತ್ತವನ್ನು ಕಂಡುಹಿಡಿಯಿರಿ

7 + 7 + □ + □ + □ + □




= □

7 → 14 → □ → □ → □ → □

18. 7 ರಿಂದ ಗುಣಿಸಿ/ಭಾಗಿಸಿ:

7 • 1 = 7	1 • 7 = 7	7 : 7 = 1	7 : 1 = 7
7 • 2 =	2 • 7 =	14 : 7 =	14 : 2 =
7 • 3 =	3 • 7 =	21 : 7 =	21 : 3 =


19. ಈ ಹುಡುಗಿ 4 ಹೂವುಗಳನ್ನು ಬಿಡಿಸಿದ್ದಾಳೆ. ಪ್ರತಿ ಹೂವಿನಲ್ಲೂ 8 ದಳಗಳಿವೆ. 4 ಹೂವುಗಳಲ್ಲಿ ಒಟ್ಟು ಎಷ್ಟು ದಳಗಳಿವೆ?



□ □ = □

20. ಸಮ ಸಂಖ್ಯೆಯ ವಸ್ತುಗಳನ್ನು ಬಳಸಿಕೊಂಡು ಮೊತ್ತವನ್ನು ಕಂಡುಹಿಡಿಯಿರಿ

8 + 8 + □ + □ + □ + □




= □

8 → 16 → □ → □ → □ → □

21. 8 ರಿಂದ ಗುಣಿಸಿ/ಭಾಗಿಸಿ:


8 • 1 =	1 • 8 =	8 : 1 =	8 : 8 =
8 • 2 =	2 • 8 =	16 : 2 =	16 : 8 =

22. 1 ಕಪಾಟಿನಲ್ಲಿ 9 ಪುಸ್ತಕಗಳನ್ನು ಜೋಡಿಸಬಹುದು. 3 ಕಪಾಟುಗಳು ಒಟ್ಟು ಎಷ್ಟು ಪುಸ್ತಕಗಳನ್ನು ಜೋಡಿಸಬಹುದು? □ □ = □



23. ಸಮ ಸಂಖ್ಯೆಯ ವಸ್ತುಗಳನ್ನು ಬಳಸಿಕೊಂಡು ಮೊತ್ತವನ್ನು ಕಂಡುಹಿಡಿಯಿರಿ

9 + 9 + □ + □ + □ + □ + □ + □

 = □

9 → 18 → □ → □ → □ → □ → □ → □

24. 9 ರಿಂದ ಗುಣಿಸಿ / ಭಾಗಿಸಿ:

9 · 1 =	1 · 9 =	9 : 1 =	9 : 9 =
9 · 2 =	2 · 9 =	18 : 2 =	18 : 9 =
9 · 3 =	3 · 9 =	27 : 3 =	27 : 9 =

25. ಕೆಳಗಿನ ಮಾದರಿ ಚಿತ್ರದಲ್ಲಿ ತೋರಿಸಿರುವಂತೆ ಪ್ರತಿಯೊಂದು ಚೌಕದಲ್ಲಿಯೂ ಅಂಕಿಗೆ ಅನುಗುಣವಾಗಿ ಚಿತ್ರಗಳನ್ನು ಬರೆಯಿರಿ. ಪಡೆದ ಸಂಖ್ಯೆಯನ್ನು ಪದಗಳಲ್ಲಿ ಬರೆಯಿರಿ.

ನೂರು	ಹತ್ತು	ಬಿಡಿ
2	5	3

ನೂರು	ಹತ್ತು	ಬಿಡಿ
4	6	1

ಇನ್ನೂರ ಐವತ್ತಮೂರು ......

ನೂರು	ಹತ್ತು	ಬಿಡಿ
3	8	0

ನೂರು	ಹತ್ತು	ಬಿಡಿ
6	0	0

ನೂರು	ಹತ್ತು	ಬಿಡಿ
7	0	5

ನೂರು	ಹತ್ತು	ಬಿಡಿ
9	4	0

26. ಹತ್ತು ಕತ್ತೆಗಳಿದ್ದು, ಪ್ರತಿಯೊಂದರ ಮೇಲೆ ಇಬ್ಬರು ಮಕ್ಕಳು ಸವಾರಿ ಮಾಡುತ್ತಿದ್ದಾರೆ. ಕತ್ತೆಗಳ ಮೇಲೆ ಸವಾರಿ ಮಾಡುತ್ತಿರುವ ಒಟ್ಟು ಮಕ್ಕಳು ಎಷ್ಟು?




27. ಚೌಕದಲ್ಲಿ ಬಿಟ್ಟ ಸಂಖ್ಯೆಗಳನ್ನು ತುಂಬಿಸಿ:

$3 \cdot \square = 15$	$5 \cdot \square = 35$	$4 \cdot 7 = \square$
$4 \cdot \square = 20$	$9 \cdot \square = 54$	$\square \cdot 3 = 27$
$\square \cdot 6 = 30$	$32 : \square = 4$	$81 : \square = 9$
$7 \cdot \square = 56$	$25 : \square = 5$	$64 : \square = 8$
$9 \cdot \square = 72$	$\square : 3 = 9$	$81 : \square = 9$
$8 \cdot \square = 64$	$\square : 5 = 8$	$\square : 6 = 9$

28.* ಒಬ್ಬ ಹುಡುಗ ಒಂದು ಸಂಖ್ಯೆಯಿಂದ ಪ್ರಾರಂಭಿಸಿ, ಅದನ್ನು 2 ರಿಂದ ಗುಣಿಸುತ್ತಾನೆ. ಬಂದ ಗುಣಲಬ್ಧಕ್ಕೆ 3ನ್ನು ಕೂಡಿದಾಗ ಅವನಿಗೆ ಸಿಗುವ ಉತ್ತರ 11. ಅವನು ಪ್ರಾರಂಭಿಸಿದ ಸಂಖ್ಯೆ ಯಾವುದು?

* ಉತ್ತರಕ್ಕೆ ಪುಟ 45 ನೋಡಿ.

29. ಒಬ್ಬ ಕುದುರೆ ಸವಾರ ಗಂಟೆಗೆ 18 ಕಿಲೋಮೀಟರ್ ವೇಗದಲ್ಲಿ ಸವಾರಿ ಮಾಡುತ್ತಿದ್ದಾನೆ. 54 ಕಿಲೋಮೀಟರ್ ಕ್ರಮಿಸಲು ಅವನಿಗೆ ಎಷ್ಟು ಸಮಯ ಬೇಕಾಗುತ್ತದೆ?



30. ಈ ಸಮೀಕರಣಗಳನ್ನು ಬಿಡಿಸಿ:

$x \cdot 6 = 54$	$x = 9$	$6 \cdot x = 48$	$x = 8$
$x \cdot 7 = 42$	$x =$	$7 \cdot x = 49$	$x =$
$5 \cdot x = 40$	$x =$	$x \cdot 8 = 72$	$x =$

31. ಒಂದು ತಟ್ಟೆಯಲ್ಲಿ 12 ಕಿತ್ತಳೆ ಹಣ್ಣುಗಳಿವೆ. ಅದರಲ್ಲಿ ಅರ್ಧದಷ್ಟನ್ನು ತೆಗೆದುಕೊಂಡು ತಾಯಿಯೊಬ್ಬಳು ತನ್ನ ಮೂವರು ಮಕ್ಕಳಿಗೆ ಸಮವಾಗಿ ಹಂಚುತ್ತಾಳೆ. ಅವಳು ಪ್ರತಿ ಮಗುವಿಗೆ ಎಷ್ಟು ಕಿತ್ತಳೆ ಹಣ್ಣುಗಳನ್ನು ನೀಡುತ್ತಾಳೆ?


32. ಒಂದು ರೈಲು 4 ಗಂಟೆಗಳಲ್ಲಿ 240 ಕಿಲೋಮೀಟರ್ ಕ್ರಮಿಸಿದೆ. ಅದು ಎಷ್ಟು ವೇಗವಾಗಿ ಪ್ರಯಾಣಿಸುತ್ತಿದೆ?

□ □ = □

33. ಈ ಸಮೀಕರಣಗಳನ್ನು ಬಿಡಿಸಿ:


x : 7 = 4 x =
x : 6 = 8 x =
x : 5 = 7 x =

x : 9 = 4 x =
x : 4 = 6 x =
x : 3 = 7 x =



34. ಒಂದು ಮೃಗಾಲಯದಲ್ಲಿ 12 ಮಂಗಗಳಿದ್ದವು ಮತ್ತು ಮಂಗಗಳ ಸಂಖ್ಯೆಗಿಂತ 5 ಹುಲಿಗಳು ಕಡಿಮೆ ಇದ್ದವು. ಮೃಗಾಲಯದಲ್ಲಿ ಒಟ್ಟು ಎಷ್ಟು ಮಂಗಗಳು ಮತ್ತು ಹುಲಿಗಳು ಇದ್ದವು? ನಿಮ್ಮ ಉತ್ತರವನ್ನು ಬರೆಯಿರಿ.

35. ಮೂರು ಕುದುರೆಗಳು 30 ಕಿಲೋಮೀಟರ್ ಕ್ರಮಿಸಿದವು. ಪ್ರತಿ ಕುದುರೆ ಎಷ್ಟು ಕಿಲೋಮೀಟರ್ ಕ್ರಮಿಸಿತು?



36. ನೀಡಲಾದ ಮಾದರಿಯನ್ನು ಅನುಸರಿಸಿ ಖಾಲಿ ಸ್ಥಳಗಳನ್ನು ತುಂಬಿ.

ಸಂಖ್ಯೆಗಳು	81, 9	65, 5	72, 8
ಮೊತ್ತ	90		
ವ್ಯತ್ಯಾಸ	72		
ಗುಣಲಬ್ಧ	729		
ಭಾಗಲಬ್ಧ	9		

37. 25 ಪೀಚ್ ಹಣ್ಣುಗಳನ್ನು 2 ತಟ್ಟೆಗಳಲ್ಲಿ ಇಡಲಾಗಿದೆ, ಒಂದು ತಟ್ಟೆಯಲ್ಲಿ ಇನ್ನೊಂದಕ್ಕಿಂತ 1 ಪೀಚ್ ಹಣ್ಣು ಹೆಚ್ಚಾಗಿದ್ದರೆ, ಪ್ರತಿ ತಟ್ಟೆಯಲ್ಲಿ ಎಷ್ಟು ಹಣ್ಣುಗಳಿವೆ? ಉತ್ತರ ಬರೆಯಿರಿ.

38. ಒಂದು ಸರೋವರದಲ್ಲಿ 24 ಬಿಳಿ ಹಂಸಗಳು ಮತ್ತು ಅದರ ಅರ್ಧದಷ್ಟು ಸಂಖ್ಯೆಯ ಕಪ್ಪು ಹಂಸಗಳು ಈಜುತ್ತಿವೆ. ಸರೋವರದಲ್ಲಿ ಒಟ್ಟು ಎಷ್ಟು ಹಂಸಗಳು ಈಜುತ್ತಿವೆ?

□ □ = □   □ □ = □

39. ಈ ಉಕ್ತಿಗಳಿಗೆ ಉತ್ತರಗಳನ್ನು ಬರೆಯಿರಿ:

$(17+13) \cdot 2 =$	$(73+27) : 4 =$
$(25+16) \cdot 4 =$	$(64+26) : 5 =$
$(28+12) \cdot 3 =$	$(100-60) \cdot 2 =$
$(65-15) \cdot 2 =$	$(67-17) \cdot 2 =$

40. 100 ಅಂಕಗಳನ್ನು ಮೊತ್ತವಾಗಿ ಗಳಿಸಲು 4 ವೃತ್ತಗಳ ಮೂಲಕ ನೀವು ಎಲ್ಲಾ ಬಗೆಯ ಮಾರ್ಗಗಳನ್ನು ಕಂಡುಹಿಡಿಯಿರಿ.






41. ಒಂದು ಕಾಡಿನ ಹುಲ್ಲುಗಾವಲಿನಲ್ಲಿ ತಾಳೆ ಮರಗಳು ಮತ್ತು ಚೆಸ್ಟ್ ನಟ್ ಗಳು ಬೆಳೆಯುತ್ತಿದ್ದವು. ತಾಳೆ ಮರಗಳು 72 ಇದ್ದು, ಅದು ಚೆಸ್ಟ್ ನಟ್ ಮರಗಳಿಗಿಂತ 3 ಪಟ್ಟಿವೆ. ಕಾಡಿನ ಹುಲ್ಲುಗಾವಲಿನಲ್ಲಿ ಒಟ್ಟು ಎಷ್ಟು ತಾಳೆ ಮರಗಳು ಮತ್ತು ಚೆಸ್ಟ್ ನಟ್ ಮರಗಳಿವೆ ?

□ □ = □   □ □ = □


42. ಇನ್ನೊಂದು ಮನೆಯ ಚಿತ್ರವನ್ನು ಈ ಮನೆಯ ದಿಕ್ಕಿನ ನ ವಿರುದ್ಧ ದಿಕ್ಕಿಗೆ ಮುಖವಿರುವಂತೆ ಬರೆಯಿರಿ.





43. **ನಿಮ್ಮ ಸ್ನೇಹಿತನ ಹುಟ್ಟಿದ ತಿಂಗಳನ್ನು ಊಹಿಸಿ.**
ಅವನು ಹುಟ್ಟಿದ ತಿಂಗಳ ಸಂಖ್ಯೆಗೆ 6 ಅನ್ನು ಸೇರಿಸಲು ಹೇಳಿ, ನಂತರ ಉತ್ತರದಿಂದ 5 ಅನ್ನು ಕಳೆಯಲು ತಿಳಿಸಿ. ಬಂದ ಉತ್ತರವನ್ನು 2 ರಿಂದ ಗುಣಿಸಿ, ಅಂತಿಮ ಉತ್ತರವನ್ನು ಅವನಿಂದ ಪಡೆದುಕೊಳ್ಳಿ. ಈ ಉತ್ತರದಿಂದ ನಿಮ್ಮ ಸ್ನೇಹಿತನ ಜನ್ಮ ತಿಂಗಳನ್ನು ನೀವು ಈಗ ಹೇಳಿ!

44* ಒಂದು ಶಾಲೆಯ ಕೆಲವು ಮಕ್ಕಳು ಮೂರು ಬಸ್‌ಗಳಲ್ಲಿ ಪ್ರವಾಸ ಹೋಗುತ್ತಾರೆ. ಅವುಗಳಲ್ಲಿ ಎರಡರಲ್ಲಿ ಒಟ್ಟು 40 ಮಕ್ಕಳಿದ್ದರು. ಪ್ರತಿ ಬಸ್‌ನಲ್ಲಿಯೂ ಸಮನಾದ ಸಂಖ್ಯೆಯ ಮಕ್ಕಳು ಇದ್ದರೆ, ಮೂರು ಬಸ್‌ಗಳಲ್ಲಿ ಒಟ್ಟು ಎಷ್ಟು ಮಕ್ಕಳಿದ್ದಾರೆ?

45* ಜೀರುಂಡೆಗೆ ಎಷ್ಟು ಕಾಲುಗಳಿವೆ? ಜೇಡಕ್ಕೆ ಎಷ್ಟು ಕಾಲುಗಳಿವೆ? ನನ್ನ ಒಂದು ಪೆಟ್ಟಿಗೆಯಲ್ಲಿ 3 ಜೀರುಂಡೆಗಳು ಮತ್ತು ಇನ್ನೊಂದು ಪೆಟ್ಟಿಗೆಯಲ್ಲಿ 3 ಜೇಡಗಳಿವೆ. ಕೋಣೆಯಲ್ಲಿ ಎರಡು ಮುಳ್ಳುಹಂದಿಗಳಿವೆ. ಮತ್ತು ಎರಡು ಪಕ್ಷಿಗಳು ಎರಡು ಪಂಜರಗಳಲ್ಲಿ ಹಾಡುತ್ತಿವೆ. ಅವುಗಳಿಗೆ ಒಟ್ಟು ಎಷ್ಟು ಕಾಲುಗಳಿವೆ ಎಂದು ನೀವು ಹೇಳಬಲ್ಲಿರಾ?








46* ಒಂದು ಕುಟುಂಬದಲ್ಲಿ ಮೂರು ಸಹೋದರರಿಗೆ ಒಬ್ಬೊಬ್ಬ ಸಹೋದರಿ ಇದ್ದಾರೆ. ಕುಟುಂಬದಲ್ಲಿ ಎಷ್ಟು ಮಕ್ಕಳಿದ್ದಾರೆ?

47* ಒಬ್ಬ ಮನುಷ್ಯ 5 ಗಂಟೆಗಳಲ್ಲಿ 25 ಕಿಲೋಮೀಟರ್ ನಡೆದಿದ್ದ. ಅವನು 4 ಗಂಟೆಗಳಲ್ಲಿ ಎಷ್ಟು ಕಿಲೋಮೀಟರ್ ನಡೆದಿದ್ದಾನೆ?




48. ಈ ಉಕ್ತಿಗಳಿಗೆ ಉತ್ತರಗಳನ್ನು ಬರೆಯಿರಿ:

$(12+13) \cdot 3 =$
$(14+15) \cdot 2 =$
$(17+23) \cdot 2 =$
$(16+20) \cdot 3 =$

$(72+28) : 2 =$
$(65+35) : 5 =$
$(81+19) : 10 =$
$(17+43) : 3 =$

49* ಇಬ್ಬರು ತಂದೆ ಮತ್ತು ಇಬ್ಬರು ಗಂಡು ಮಕ್ಕಳು 3 ಕಿತ್ತಳೆ ಹಣ್ಣುಗಳನ್ನು ಖರೀದಿಸುತ್ತಾರೆ. ಪ್ರತಿಯೊಬ್ಬರಿಗೂ ಒಂದೊಂದು ಕಿತ್ತಳೆಹಣ್ಣು ಸಿಗುತ್ತದೆ. ಇದು ಹೇಗೆ ಸಾಧ್ಯ?



50* ಒಂದು ತೆಂಗಿನ ಮರದಿಂದ 65 ತೆಂಗಿನಕಾಯಿಗಳನ್ನು ಕಿತ್ತು, 25 ತೆಂಗಿನಕಾಯಿಗಳನ್ನು ಒಂದು ಬುಟ್ಟಿಯಲ್ಲಿ ಹಾಕಲಾಯಿತು ಮತ್ತು ಉಳಿದವುಗಳನ್ನು ಇನ್ನೂ 2 ಬುಟ್ಟಿಗಳಿಗೆ ಸಮವಾಗಿ ಹಾಕಲಾಯಿತು. ಪ್ರತಿ ಬುಟ್ಟಿಯಲ್ಲಿ ಎಷ್ಟೆಷ್ಟು ತೆಂಗಿನಕಾಯಿಗಳಿದ್ದವು?

□ □ = □


□ □ = □

51* ಒಬ್ಬ ಹುಡುಗ 12 ನೋಟ್‌ಬುಕ್‌ಗಳನ್ನು ಖರೀದಿಸಿದನು, ಅದು ಇನ್ನೊಬ್ಬ ಹುಡುಗ ಖರೀದಿಸಿದ ನೋಟ್‌ಬುಕ್‌ಗಳ ಸಂಖ್ಯೆಗೆ ಎರಡು ಪಟ್ಟು ಹೆಚ್ಚು. ಆ ಇಬ್ಬರೂ ಹುಡುಗರೂ ಒಟ್ಟು ಎಷ್ಟು ನೋಟ್‌ಬುಕ್‌ಗಳನ್ನು ಖರೀದಿಸಿದರು?

□ □ = □

□ □ = □

52* ಚಿತ್ರದಲ್ಲಿ ನೀಡಲಾದ ಸಂಖ್ಯೆಗಳನ್ನು ಗುಣಿಸಿ, ಭಾಗಿಸಿ, ಕೂಡಿಸಿ ಅಥವಾ ಕಳೆಯುವ ಮೂಲಕ 100 ಉತ್ತರವನ್ನು ಹೊಂದಿರುವ ಉಕ್ತಿಗಳನ್ನು ಕಂಡುಹಿಡಿಯಿರಿ. ಉದಾ: 20 ×4+20=100



53* ಒಬ್ಬ ಹುಡುಗಿ 10 ಆನೆಗಳ ಆಟಿಕೆಯನ್ನು ಖರೀದಿಸಿದಳು, ಇನ್ನೊಬ್ಬಳು ಮೊದನೆಯವಳಿಗಿಂತ 2 ಕಡಿಮೆ ಆನೆಗಳನ್ನು ಖರೀದಿಸಿದಳು. ಮೂರನೇ ಹುಡುಗಿಯು ಈ ಇಬ್ಬರೂ ಖರೀದಿಸಿದ ಒಟ್ಟು ಸಂಖ್ಯೆಯ ಆನೆಗಳನ್ನು ಖರೀದಿಸಿದಳು. ಮೂರನೇ ಹುಡುಗಿ ಎಷ್ಟು ಆನೆಗಳನ್ನು ಖರೀದಿಸಿದಳು?

54. ಈ ಸಮೀಕರಣಗಳನ್ನು ಪರಿಹರಿಸಿ:

$x : 3 = 75$	$x \cdot 4 = 360$	$x - 153 = 200$
$x =$	$x =$	$x =$
$x \cdot 6 = 480$	$x : 15 = 25$	$175 - x = 73$
$x =$	$x =$	$x =$

55* ಎರಡು ರೇಖೆಗಳನ್ನು ಎಳೆದು ಈ ಆಯತವನ್ನು 3 ಭಾಗಗಳಾಗಿ ವಿಂಗಡಿಸಿ.



56. ಪ್ರತಿ ರೈಲ್ವೇ ಫ್ಲಾಟ್-ವ್ಯಾಗನ್ ನ ಮೇಲೆ ತಲಾ 3 ಕಾರುಗಳಂತೆ ಒಟ್ಟು 36 ಕಾರುಗಳನ್ನು ಇರಿಸಲಾಗಿದೆ ಮತ್ತು ಪ್ರತಿ ಫ್ಲಾಟ್-ವ್ಯಾಗನ್ ನ ಮೇಲೆ ತಲಾ 2 ಲಾರಿಗಳಂತೆ ಒಟ್ಟು 18 ಲಾರಿಗಳನ್ನು ಇರಿಸಲಾಗಿದೆ. ರೈಲಿನಲ್ಲಿ ಒಟ್ಟು ಎಷ್ಟು ಫ್ಲಾಟ್-ವ್ಯಾಗನ್‌ಗಳಿವೆ? ಉತ್ತರ ಬರೆಯಿರಿ.

□ □ = □   □ □ = □

□ □ = □

57. ನಿಮ್ಮ ಸ್ನೇಹಿತನಿಗೆ ಅವನ ಮನೆಯ ಸಂಖ್ಯೆಯಿಂದ 1ನ್ನು ಕಳೆಯಲು ಹೇಳಿ, ನಂತರ 2ನ್ನು ಕೂಡಲಿ ಮತ್ತು 2 ಅನ್ನು ಮತ್ತೆ ಕೂಡಿಸಿ ಫಲಿತಾಂಶವನ್ನು ಹೇಳಲು ಹೇಳಿ. ಈಗ ನೀವು ನಿಮ್ಮ ಸ್ನೇಹಿತನ ಮನೆಯ ಸಂಖ್ಯೆಯನ್ನು ಲೆಕ್ಕ ಹಾಕಬಹುದು. ಸಾಧ್ಯವಿಲ್ಲವೇ?



58. ಇದಕ್ಕಿಂತ ವೇಗವಾಗಿ ಲೆಕ್ಕ ಹಾಕುವುದು ಹೇಗೆ?

$(2 \cdot 5)+2+2+2+2+2=$

59. ಒಂದು ಸಾಲಿನಲ್ಲಿ 15 ರಂತೆ ಕೆಲವು ಅನಾನಸ್ ಸಸಿಗಳನ್ನು ನೆಡಲಾಗಿದೆ. 3 ಸಾಲುಗಳಲ್ಲಿ ಎಷ್ಟು ಸಸಿಗಳಿವೆ? 6 ಸಾಲುಗಳು ಎಷ್ಟಿವೆ? ಪರಿಹಾರವನ್ನು ಬರೆಯಿರಿ.


□ □ = □   □ □ = □

60. ನಿಮ್ಮ ಸ್ನೇಹಿತನಿಗೆ ಒಂದು ಸಂಖ್ಯೆಯನ್ನು ಮನಸಿನಲ್ಲಿ ಇಟ್ಟುಕೊಳ್ಳಲು ಹೇಳಿ. ನಂತರ ಅದಕ್ಕೆ 4ನ್ನು ಕೂಡಲು ಹೇಳಿ. ಉತ್ತರವನ್ನು 3 ರಿಂದ ಗುಣಿಸಿ, ಗುಣಲಬ್ಧದಿಂದ 7 ಅನ್ನು ಕಳೆಯಲು ಹೇಳಿ. ಅದರಿಂದ 5 ಅನ್ನು ಕಳೆಯಲು ಹೇಳಿ. ಬಂದ ಫಲಿತಾಂಶ ತಿಳಿದುಕೊಂಡು, ನಿಮ್ಮ ಸ್ನೇಹಿತ ಇಟ್ಟುಕೊಂಡ ಸಂಖ್ಯೆಯನ್ನು ಊಹಿಸಿ.

61. ಒಬ್ಬ ಹುಡುಗ ತನ್ನ ತಂಗಿಗೆ ತನ್ನ ಬಳಿಯಿರುವ ಸಂಖ್ಯೆಯ ಅರ್ಧದಷ್ಟು ಕಿತ್ತಲೆಹಣ್ಣುಗಳನ್ನು ಮತ್ತು ಮತ್ತೊಂದು ಕಿತ್ತಲೆಹಣ್ಣನ್ನು ಕೊಡುತ್ತಾನೆ. ಆನಂತರ ಅವನ ಬಳಿ ಈಗ ಯಾವುದೇ ಕಿತ್ತಲೆಹಣ್ಣುಗಳು ಉಳಿಯುವುದಿಲ್ಲ. ಹಾಗಾದರೆ ಮೊದಲು ಅವನ ಬಳಿ ಎಷ್ಟು ಕಿತ್ತಲೆಹಣ್ಣುಗಳಿದ್ದವು?



62. ಒಬ್ಬ ಪೋಸ್ಟ್‌ಮ್ಯಾನ್ ನದಿಯನ್ನು ದಾಟಬೇಕು. ಅವನು ದೋಣಿಯಲ್ಲಿರುವ ಇಬ್ಬರು ಹುಡುಗರನ್ನು ನದಿಯನ್ನು ದಾಟಲು ಸಹಾಯ ಮಾಡುವಂತೆ ಕೇಳುತ್ತಾನೆ. ಆದರೆ ದೋಣಿ ತುಂಬಾ ಚಿಕ್ಕದಾಗಿದ್ದು, ಅದರಲ್ಲಿ ಇಬ್ಬರು ಹುಡುಗರು ಅಥವಾ ವಯಸ್ಕರೊಬ್ಬರು ಮಾತ್ರ ಸಾಧ್ಯ. ಹುಡುಗರು ಒಂದು ನಿಮಿಷ ಯೋಚಿಸಿ ನಂತರ ಆ ವ್ಯಕ್ತಿಯನ್ನು ನದಿಯನ್ನು ದಾಟಿಸುವುದು ಹೇಗೆ ಎಂದು ಯೋಚಿಸಿದರು. ಅವರು ಅದನ್ನು ಹೇಗೆ ಮಾಡಿದರು?




63. ಒಬ್ಬ ಹುಡುಗಿ ನೆಲದಿಂದ ಒಂದು ಮೀಟರ್ ಎತ್ತರದ ಹಗ್ಗದ ಮೇಲೆ ಹಾರಬಹುದು. ಹಾಗಿದ್ದಾಗ ಇಬ್ಬರು ಹುಡುಗಿಯರು ಎಷ್ಟು ಎತ್ತರಕ್ಕೆ ಹಾರಬಹುದು?

64. ಇಲ್ಲಿ ನೀಡಲಾದ ಪ್ರತಿಯೊಂದು ರೇಖಾಚಿತ್ರದಲ್ಲಿ ಯಾವ ಜ್ಯಾಮಿತೀಯ ಆಕಾರಗಳು ಇವೆ? ರೇಖಾಚಿತ್ರಗಳ ನಡುವಿನ ವ್ಯತ್ಯಾಸವೇನು?




65. ಈ ಹುಡುಗಿ 3 ಸಿಹಿತಿಂಡಿಗಳನ್ನು ತಿಂದಿದ್ದಾಳೆ ಮತ್ತು ಆನಂತರ ಇನ್ನೊಂದನ್ನು ತಿನ್ನಲು ಬಯಸುತ್ತಾಳೆ ಅವಳು ಎಷ್ಟು ಸಿಹಿತಿಂಡಿಗಳನ್ನು ಆಗ ತಿಂದ ಹಾಗಾಯಿತು ?


66. ತಮ್ಮನ ವಯಸ್ಸು ಈಗ 3 ವರ್ಷ. ಅವನ ಅಕ್ಕ 2 ವರ್ಷಗಳ ಹಿಂದೆ ಅವನಿಗಿಂತ 5 ವರ್ಷ ದೊಡ್ಡವಳು. ಈಗ ಅವಳ ವಯಸ್ಸು ಎಷ್ಟು?




67. ಯಾವ ಎರಡು ಸಂಖ್ಯೆಗಳನ್ನು ಪರಸ್ಪರ ಕೂಡಿದಾಗ ಅಥವಾ ಪರಸ್ಪರ ಗುಣಿಸಿದಾಗ ಸಮನಾದ ಫಲಿತಾಂಶವನ್ನು ನೀಡುತ್ತದೆ?

68. ಟೇಬಲ್ ಮೇಲೆ ಬೇರೆ ಬೇರೆ ಉದ್ದದ ಮೂರು ಪೆನ್ಸಿಲ್‌ಗಳಿವೆ. ಮಧ್ಯದ ಪೆನ್ಸಿಲ್ ಮುಟ್ಟದೆ, ಮಧ್ಯದಲ್ಲಿರುವ ಅತಿ ಉದ್ದದ ಪೆನ್ಸಿಲ್ ಅನ್ನು ನೀವು ಹೇಗೆ ತೆಗೆಯಬಹುದು





69. ಒಂದು ಪಾರ್ಕಿನಲ್ಲಿ ಬಿಳಿ ಗುಲಾಬಿಗಳ ಸಂಖ್ಯೆಗಿಂತ 3 ಪಟ್ಟು ಹೆಚ್ಚಾಗಿ 1008 ಕೆಂಪು ಗುಲಾಬಿಗಳು ಬೆಳೆದಿದ್ದವು. ಪಾರ್ಕಿನಲ್ಲಿ ಒಟ್ಟು ಎಷ್ಟು ಕೆಂಪು ಮತ್ತು ಬಿಳಿ ಗುಲಾಬಿಗಳು ಬೆಳೆಯುತ್ತಿದ್ದವು? ನಿಮ್ಮ ಉತ್ತರವನ್ನು ಬರೆಯಿರಿ.



70. ನಿಮ್ಮ ಬಳಿ 3 ಬೆಂಕಿಕಡ್ಡಿಗಳಿವೆ. ಅವುಗಳನ್ನು ಮುರಿಯದೆ ನೀವು ನಾಲ್ಕು ಕಡ್ಡಿಗಳನ್ನು ಹೇಗೆ ಮಾಡಬಹುದು?

71. ಮೇಜಿನ ಮೇಲೆ 3 ಬೆಂಕಿಕಡ್ಡಿಗಳಿವೆ. 8 ನ್ನು ಪಡೆಯಲು ನೀವು ಇನ್ನೂ 2 ಬೆಂಕಿಕಡ್ಡಿಗಳನ್ನು ಸೇರಿಸಬೇಕು. ನೀವು ಅದನ್ನು ಹೇಗೆ ಮಾಡಬಹುದು?

72. ಇದಕ್ಕಿಂತ ವೇಗವಾಗಿ ಲೆಕ್ಕ ಹಾಕುವುದು ಹೇಗೆ?

$$25 \cdot 7 \cdot 4 + 300 =$$
$$8 \cdot 4 + 8 \cdot 3 + 8 \cdot 2 + 8 \cdot 1 =$$
$$87 + 50 + 13 : 75 : 25 - 2 =$$


7 ಮನರಂಜನಾತ್ಮಕ ಗುಣಾಕಾರ "ಬೆರಳಿನ ಮಗ್ಗ". 5 ಕ್ಕಿಂತ ದೊಡ್ಡ ಸರಳ ಅಂಕಿಗಳಿಗೆ

ನೀವು 8 ರಿಂದ 6 ನ್ನು ಗುಣಿಸಬೇಕಾಗಿದೆ ಎಂದು ಭಾವಿಸೋಣ. ಒಂದು ಕೈಯ 3 ಬೆರಳುಗಳನ್ನು ಚಾಚಿ (8 ಎಂದರೆ 5 ಕ್ಕಿಂತ 3 ಹೆಚ್ಚು) ಮತ್ತು 2 ಬೆರಳುಗಳನ್ನು ಬಗ್ಗಿಸಿ; ಇನ್ನೊಂದು ಕೈಯ 1 ಬೆರಳನ್ನು ಚಾಚಿ (6 ಎಂದರೆ 5 ಕ್ಕಿಂತ 1 ಹೆಚ್ಚು) ಮತ್ತು ಇತರ 4 ಬೆರಳುಗಳನ್ನು ಬಗ್ಗಿಸಿ. ಚಾಚಿದ ಬೆರಳುಗಳು ಪ್ರತಿಯೊಂದೂ ಹತ್ತಕ್ಕೆ ಸಮಾನವಾಗಿವೆ, ಅವೆಲ್ಲವನ್ನೂ ಒಟ್ಟಿಗೆ ಸೇರಿಸಿ (3 ಹತ್ತು + 1 ಹತ್ತು = 4 ಹತ್ತು); ಬಾಗಿದ ಬೆರಳುಗಳು ಪ್ರತಿಯೊಂದೂ ಬಿಡಿ ಸ್ಥಾನಕ್ಕೆ ಸಮವಾಗಿದೆ, ಅವುಗಳನ್ನು ಗುಣಿಸಿ (2×4 = 8). ಬಿಡಿಗಳ ಸಂಖ್ಯೆಯನ್ನು ಹತ್ತರ ಸ್ಥಾನಕ್ಕೆ ಸಂಖ್ಯೆಗೆ ಸೇರಿಸಿ, ಉತ್ತರ (40+8 = 48) ಪಡೆಯಿರಿ!.




9 ರಿಂದ ಗುಣಿಸಲು

ನಿಮ್ಮ ಎರಡು ಕೈಗಳನ್ನು ಮೇಜಿನ ಮೇಲೆ ಇರಿಸಿ: ನಿಮ್ಮ ಹತ್ತು ಬೆರಳುಗಳು 'ಕಂಪ್ಯೂಟರ್' ಆಗಿ ಹೇಗೆ ಕಾರ್ಯನಿರ್ವಹಿಸುತ್ತವೆ, ನೀವೇ ನೋಡಿ. ಎಡದಿಂದ ಬಲಕ್ಕೆ ಎಣಿಸಿ. ಉದಾಹರಣೆಗೆ, ನೀವು 4 ಅನ್ನು 9 ರಿಂದ ಗುಣಿಸಲು ಬಯಸುತ್ತೀರಿ ಎಂದು ಹೇಳಿ. ನಾಲ್ಕನೇ ಬೆರಳು ನಿಮಗೆ ಉತ್ತರವನ್ನು ನೀಡುತ್ತದೆ: ಅದರ ಎಡಕ್ಕೆ 3 ಬೆರಳುಗಳು ಮತ್ತು ಬಲಕ್ಕೆ 6 ಬೆರಳುಗಳಿವೆ, ಆದ್ದರಿಂದ ಫಲಿತಾಂಶವು 36 ಆಗಿದೆ. ಇನ್ನೊಂದು ಉದಾಹರಣೆ: 7 x 9 ಎಂದರೇನು? ಅಂಗೈನಲ್ಲಿ ಏಳನೇ ಬೆರಳಿನಲ್ಲಿ ಎಡಕ್ಕೆ 6 ಬೆರಳುಗಳು ಮತ್ತು ಬಲಕ್ಕೆ 3 ಬೆರಳುಗಳಿವೆ. ಆದ್ದರಿಂದ 7 × 9 ನಿಮಗೆ 63 ನೀಡುತ್ತದೆ.




2. ಭಿನ್ನರಾಶಿಗಳು


74. ಈ ಜ್ಯಾಮಿತೀಯ ಆಕಾರಗಳನ್ನು ಎಷ್ಟು ಸಮ ಭಾಗಗಳಾಗಿ ವಿಂಗಡಿಸಲಾಗಿದೆ? ಪ್ರತಿ ಚಿತ್ರದಲ್ಲಿ ಬಣ್ಣಗೊಳಿಸಿದ ಪ್ರದೇಶದ ಭಿನ್ನರಾಶಿಯನ್ನು ಬರೆಯಿರಿ.




75. ಈ ಜ್ಯಾಮಿತೀಯ ಆಕಾರಗಳನ್ನು ಎಷ್ಟು ಸಮ ಭಾಗಗಳಾಗಿ ವಿಂಗಡಿಸಲಾಗಿದೆ? ಪ್ರತಿ ಚಿತ್ರದಲ್ಲಿ ಬಣ್ಣಗೊಳಿಸಿದ ಪ್ರದೇಶದ ಭಿನ್ನರಾಶಿಯನ್ನು ಬರೆಯಿರಿ.



76. ಇವುಗಳಲ್ಲಿ ಯಾವ ಭಿನ್ನರಾಶಿಯು ದೊಡ್ಡದಾಗಿದೆ?




77.* 30 ವೃತ್ತಗಳಲ್ಲಿ 1/2 ದಷ್ಟು ಅಂದರೆ ಎಷ್ಟು? 30 ವೃತ್ತಗಳಲ್ಲಿ 1/3 ರಷ್ಟು ಅಂದರೆ ಎಷ್ಟು?




78.* 12 ತ್ರಿಕೋನಗಳಲ್ಲಿ 1/2 ಭಾಗ ಎಷ್ಟು ತ್ರಿಕೋನಗಳಾಗುವುದು?
ಈ ತ್ರಿಕೋನಗಳಲ್ಲಿ 1/3 ಭಾಗಕ್ಕೆ ಬಣ್ಣ ಹಚ್ಚಿ.




79.* ಈ ಪಟ್ಟಿಯ 1/4 ಭಾಗ ಎಷ್ಟು ಉದ್ದವಿದೆ?




80. ಮಾದರಿಯನ್ನು ಅನುಸರಿಸಿ ವೃತ್ತಗಳಿಗೆ ಬಣ್ಣ ಹಚ್ಚಿ.



81.* 15 ಚೌಕಗಳಲ್ಲಿ 1/3 ಭಾಗ ಎಷ್ಟು ಚೌಕಗಳಿಂದ ಕೂಡಿರುತ್ತದೆ?



82.* ಒಂದು ನದಿಯಲ್ಲಿ ತೇಲುತ್ತಿರುವ ಎಲ್ಲಾ ದೋಣಿಗಳಲ್ಲಿ 1/3 ಭಾಗ 6 ದೋಣಿಗಳಿಗೆ ಸಮವಾದರೆ, ಅಲ್ಲಿ ಒಟ್ಟು ಎಷ್ಟು ದೋಣಿಗಳಿವೆ?




83. ಒಂದು ಅಂಗಡಿಯಲ್ಲಿರುವ ಒಟ್ಟು ಸೈಕಲ್‌ಗಳ ಸಂಖ್ಯೆಯ 1/5 ಭಾಗ 7 ಸೈಕಲ್‌ಗಳಾಗಿರುತ್ತದೆ. ಆಗ ಅಂಗಡಿಯಲ್ಲಿ ಒಟ್ಟು ಎಷ್ಟು ಸೈಕಲ್‌ಗಳಿವೆ?




□ □ = □

84. ಒಂದು ಪಟ್ಟಿಯ 1/3 ಭಾಗವು 10 ಸೆಂ.ಮೀ ಆಗಿದ್ದರೆ, ಇಡೀ ಪಟ್ಟಿಯ ಉದ್ದ ಎಷ್ಟು?



□ □ = □

85. ತೋಟದಲ್ಲಿರುವ ಎಲ್ಲಾ ಮರಗಳಲ್ಲಿ 10 ಹಣ್ಣಿನ ಮರಗಳು 1/5 ಭಾಗವಾಗಿವೆ ತೋಟದಲ್ಲಿ ಒಟ್ಟು ಎಷ್ಟು ಹಣ್ಣಿನ ಮರಗಳಿವೆ?



□ □ = □

86. ಕೊಟ್ಟಿರುವ ಸಂಖ್ಯೆಗಳಿಗೆ ಭಿನ್ನರಾಶಿಗಳನ್ನು ಬರೆಯಿರಿ:


	30	40	50	60	70	80	90
1/2 ಭಾಗವನ್ನು ಕಂಡುಹಿಡಿಯಿರಿ							
1/5 ಬಾಗವನ್ನು ಕಂಡುಹಿಡಿಯಿರಿ							

87. ಒಂದು ಕಾಡಿನ ಹುಲ್ಲುಗಾವಲಿನಲ್ಲಿ 17 ಬಿಳಿ ಚಿಟ್ಟೆಗಳು ಹಾರುತ್ತಿದ್ದವು ಮತ್ತು ಹಳದಿ ಚಿಟ್ಟೆಗಳ ಸಂಖ್ಯೆ ಇದರ ಎರಡರಷ್ಟಿತ್ತು ಹಾಗಾದರೆ ಒಟ್ಟು ಎಷ್ಟು ಚಿಟ್ಟೆಗಳು ಹಾರುತ್ತಿದ್ದವು?

□ □ = □ ( )




88. ಚಕ್ರವ್ಯೂಹದಲ್ಲಿ ಎಷ್ಟು ವಿಭಿನ್ನ ಮಾರ್ಗಗಳು ನಿಮಗೆ 125 ಅಂಕಗಳನ್ನು ನೀಡುತ್ತವೆ? ಉದಾ: 25× 2 +75



3. ಸಮಯದ ಅವಧಿಗಳು ಮತ್ತು ಅವುಗಳ ಅಳತೆ

89* ಪ್ರತಿ ಗಡಿಯಾರವು ಎಷ್ಟು ಸಮಯವನ್ನು ತೋರಿಸುತ್ತಿದೆ? ನಿಮಿಷದ ಮುಳ್ಳು ಅರ್ಧವೃತ್ತದ ಚಲಿಸಲು ಎಷ್ಟು ನಿಮಿಷಗಳನ್ನು ತೆಗೆದುಕೊಳ್ಳುತ್ತದೆ? ವೃತ್ತದ ಕಾಲು ಭಾಗಕ್ಕೆ? ಒಂದು ದೊಡ್ಡ ಸಂಖ್ಯೆಯಿಂದ ಇನ್ನೊಂದು ಸಂಖ್ಯೆಗೆ ಚಲಿಸಲು ನಿಮಿಷದ ಮುಳ್ಳು ಎಷ್ಟು ನಿಮಿಷಗಳನ್ನು ತೆಗೆದುಕೊಳ್ಳುತ್ತದೆ?






ಗಡಿಯಾರದ ಮುಳ್ಳುಗಳನ್ನು ಸರಿಯಾದ ಸ್ಥಾನದಲ್ಲಿ ಎಳೆಯಿರಿ.

90* ಒಂದು ಪಾಠದ ಅವಧಿಯು 8 ಗಂಟೆಯ ಆನಂತರ 30 (8.30) ನಿಮಿಷಗಳಿಗೆ ಪ್ರಾರಂಭವಾಗುತ್ತದೆ ಮತ್ತು 45 ನಿಮಿಷಗಳವರೆಗೆ ನಡೆಯುತ್ತದೆ. ಅದು ಯಾವಾಗ ಕೊನೆಗೊಳ್ಳುತ್ತದೆ?

ವಿರಾಮವು 10 ನಿಮಿಷಗಳವರೆಗೆ ಇರುತ್ತದೆ. ಮುಂದಿನ ಅವಧಿ ಯಾವಾಗ ಪ್ರಾರಂಭವಾಗುತ್ತದೆ ಮತ್ತು ಯಾವಾಗ ಕೊನೆಗೊಳ್ಳುತ್ತದೆ?

ಪಾಠಗಳು 8.30 ಕ್ಕೆ ಪ್ರಾರಂಭವಾಗಿ 5 ಗಂಟೆಗಳ ವರೆಗೂ ಇರುತ್ತವೆ. ಅವು ಎಷ್ಟು ಗಂಟೆಗೆ ಕೊನೆಗೊಳ್ಳುತ್ತವೆ?



91* ಒಂದು ಚಲನಚಿತ್ರ ಪ್ರದರ್ಶನವು 10 ಗಂಟೆಗೆ ಪ್ರಾರಂಭವಾಗಿ 11.30 ಕ್ಕೆ ಕೊನೆಗೊಳ್ಳುತ್ತದೆ. ಅದರ ಅವಧಿ ಎಷ್ಟು? 2 ಪ್ರದರ್ಶನಗಳ ನಡುವಿನ ಮಧ್ಯಂತರವು 15 ನಿಮಿಷಗಳಾಗಿದ್ದರೆ ಮುಂದಿನ ಪ್ರದರ್ಶನವು ಯಾವ ಸಮಯಕ್ಕೆ ಪ್ರಾರಂಭವಾಗುತ್ತದೆ?

92* ಪ್ರತಿ ಭಾಗದಲ್ಲಿರುವ ಸಂಖ್ಯೆಗಳ ಮೊತ್ತವು ಸಮವಾಗಿರುವಂತೆ ಗಡಿಯಾರದ ಮುಖವನ್ನು 3 ಭಾಗಗಳಾಗಿ ವಿಂಗಡಿಸಿ.



93* 12 ಸಹೋದರರು ಒಂದೇ ಸಾಲಿನಲ್ಲಿ ಒಬ್ಬರ ಹಿಂದೆ ಒಬ್ಬರು ನಡೆದುಕೊಂಡು ಹೋಗುತ್ತಿದ್ದಾರೆ. ಅವರು ಎಂದಿಗೂ ಸರತಿ ಸಾಲನ್ನು ಬಿಡುವುದಿಲ್ಲ, ಆದರೆ ಒಬ್ಬರ ಹಿಂದೆ ಒಬ್ಬರು ಬರುತ್ತಾರೆ. ಅವರುಗಳ ಹೆಸರೇನು?



ಸರಪಳಿ

94. ಈ ಗುಣಾಕಾರ ಮತ್ತು ಭಾಗಾಕಾರ ಉಕ್ತಿಗಳ ಸರಣಿಗೆ ಮೊದಲು ಉತ್ತರಿಸುವವನು ವಿಜೇತನಾಗುತ್ತಾನೆ.

ಉದಾಹರಣೆ ನೋಡಿ.

$7 \cdot 4 = 28$
$4 \cdot 7 = 28$
$28 = 7 \cdot 4$
$28 : 4 = 7$
$28 : 7 = 4$

$3 \cdot 9 =$

$6 \cdot 5 =$


$7 \cdot 8 = 56$
$8 \cdot 7 = 56$
$56 = 7 \cdot 8$
$56 : 8 = 7$
$56 : 7 = 8$

$5 \cdot 9 =$

$6 \cdot 7 =$

ನಾನು ಕ್ಯಾಪ್ಟನ್.

95. ಒಬ್ಬ ಕ್ಯಾಪ್ಟನ್ ತನ್ನ ಹಡಗುಗಳನ್ನು ನಿಗದಿತ ಹಾದಿಯಲ್ಲಿ ಮುನ್ನಡೆಸಬೇಕು. ಪ್ರತಿಯೊಂದು ಹಡಗಿನ ಸ್ಥಾನವನ್ನು ಅಂಕಗಣಿತದ ಸಮಸ್ಯೆಯಾಗಿ ಸಂಕೇತಿಸಲಾಗಿದೆ. ಹಡಗುಗಳನ್ನು ಸರಿಯಾಗಿ ಮುನ್ನಡೆಸಲು ನೀವು ಪ್ರತಿಯೊಂದು ಸಮಸ್ಯೆಯನ್ನು ಪರಿಹರಿಸಬೇಕು; ಉತ್ತರಗಳು ಪ್ರತಿ ಹಡಗು ಎಷ್ಟು ಮೈಲುಗಳಷ್ಟು ಪ್ರಯಾಣಿಸಬೇಕು ಎಂಬುದಾಗಿದೆ. ಹಡಗಿನ ಹಾದಿಯನ್ನು ಸಂಖ್ಯಾರೇಖೆಯ ಮೇಲೆ ಬಾಣದಿಂದ ಗುರುತಿಸಿ. ತನ್ನ ಹಡಗಿನ ಹಾದಿಯನ್ನು ಯೋಜಿಸುವುದನ್ನು ಮೊದಲು ಮುಗಿಸುವವನೇ ನಿಜವಾದ ಕ್ಯಾಪ್ಟನ್.




ನಾನು ಪೈಲಟ್.

96. ಎಲ್ಲಾ ಸಮಸ್ಯೆಗಳನ್ನು ಸರಿಯಾಗಿ ಮೊದಲು ಪರಿಹರಿಸುವರು ಪೈಲಟ್ ಆಗುತ್ತಾರೆ. ನೀವು ಪೈಲಟ್ ಆಗುವಿರಾ?

3 · 7 =	6 · 4 =	63 : 7 =	56 : 8 =
5 · 3 =	8 · 3 =	49 : 7 =	54 : 9 =
8 · 4 =	9 · 3 =	72 : 8 =	45 : 9 =
9 · 4 =	9 · 8 =	90 : 9 =	35 : 7 =
5 · 6 =	6 · 7 =	81 : 9 =	56 : 8 =
7 · 7 =	8 · 8 =	64 : 8 =	30 : 5 =
4 · 8 =	9 · 7 =	24 : 4 =	42 : 7 =


ನಾನು ಸ್ಕೈಡೈವರ್.

97. ಪ್ರತಿಯೊಂದು ಪ್ಯಾರಾಚೂಟ್‌ನಲ್ಲಿ ಹಾರಾಟದ ದಿಕ್ಕನ್ನು ಗುರುತಿಸಲಾಗಿದೆ. ಪ್ರತಿಯೊಂದು ಪ್ಯಾರಾಚೂಟ್ ಇಳಿವ ಸ್ಥಳವನ್ನು ನೀವು ಬಾಣದಿಂದ ಗುರುತಿಸಬೇಕು. ಹಾಗೆ ಮಾಡುವ ಮೊದಲಿಗರು ನಿಜವಾದ ಸ್ಕೈಡೈವರ್ ಆಗುತ್ತಾರೆ.



ನಾನು ಒಬ್ಬ ಗಗನಯಾತ್ರಿ.

98. ಗಗನಯಾತ್ರಿಯಾಗಲು ನೀವು ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕು: ಈ ಉಕ್ತಿಗಳ ಸರಣಿಗೆ ತ್ವರಿತವಾಗಿ ಉತ್ತರಿಸಿ. ಉದಾಹರಣೆ ನೋಡಿ.



7 · 2 =
2 · 7 =

8 · 9 =

9 · 6 =

7 · 8 =

14 = □ · □
14 : 7 = □
14 : 2 = □

2) ಈಗ ನೀವು ನಿಮ್ಮ ಮೊದಲ ಬಾಹ್ಯಾಕಾಶ ಹಾರಾಟದಲ್ಲಿದ್ದೀರಿ. ಪ್ರತಿಯೊಬ್ಬ ಗಗನಯಾತ್ರಿಯಂತೆ, ನೀವು ಕಷ್ಟಕರವಾದ ಸಂಖ್ಯೆಯ ಕಾರ್ಯಾಚರಣೆಗಳನ್ನು ನಿರ್ವಹಿಸಬೇಕಾಗುತ್ತದೆ. ನಿಮ್ಮನ್ನು ನಿಜವಾದ ಗಗನಯಾತ್ರಿ ಎಂದು ಸಾಬೀತುಪಡಿಸಿ:

35 · 2 =	72 : 3 =	18 · 5 : 2 =
13 · 7 =	64 : 4 =	70 : 2 : 5 =
19 · 4 =	36 : 2 =	27 + 68 =
24 · 3 =	72 : 2 =	24 : 4 · 9 =
25 · 4 =	96 : 2 =	62 : 2 · 2 =

ಪ್ರಯತ್ನಿಸಿ ಮತ್ತು ಊಹಿಸಿ

99. ನಿಮಗೆ ಗುಣಲಬ್ಧವಾಗಿರುವ ಉತ್ತರವನ್ನು ನೀಡಲಾಗಿದೆ. ಅದರ ಅಪವರ್ತನಗಳು ಯಾವುವು ಎಂದು ಊಹಿಸಿ ಮತ್ತು ಅವುಗಳನ್ನು ಚೌಕಗಳಲ್ಲಿ ಬರೆಯಿರಿ:

36	72	81	64
☐ ☐	☐ ☐	☐ ☐	☐ ☐
56	48	63	35
☐ ☐	☐ ☐	☐ ☐	☐ ☐

ಅತ್ಯುತ್ತಮ ಆಟಗಾರ

100. ಎಲ್ಲಾ ಚೌಕಗಳನ್ನು ಮೊದಲು ತುಂಬುವವರು ಅತ್ಯುತ್ತಮ ಆಟಗಾರ ಎನಿಸಿಕೊಳ್ಳುತ್ತಾರೆ.:

a	30	50	75	64	81	72
b	15	10	5	4	9	8
a + b	30+15=45					
a − b						
a • b						
a : b						

ಒಂದು ಜಾದೂ ಪೆನ್ಸಿಲ್

101. ಒಂದು ಜಾದೂ ಪೆನ್ಸಿಲ್ ನಿಮಗೆ ಒಂದು ಪರೀಕ್ಷೆಯನ್ನು ನೀಡುತ್ತದೆ. ನೀವು ಸಮಸ್ಯೆಗಳನ್ನು ಪರಿಹರಿಸಿ, ನೀವೇ ಉತ್ತಮರೆಂದು ಸಾರಿ ಹೇಳಿ!



$35 + 15 : 2 =$ $\qquad$ $37 + 23 \cdot 3 =$

$75 - 25 \cdot 2 =$ $\qquad$ $175 - 25 : 3 =$

$63 - 13 \cdot 3 =$ $\qquad$ $185 - 60 : 5 =$

$93 - 13 \cdot 2 =$ $\qquad$ $150 - 50 : 4 =$

ಅತ್ಯುತ್ತಮ ಮೀನುಗಾರ

102. ಪ್ರತಿಯೊಂದು ಮೀನಿನ ಸ್ಥಾನವನ್ನು ಅಂಕಗಣಿತದ ಸಮಸ್ಯೆಯಲ್ಲಿ ಸಂಕೇತಿಸಲಾಗಿದೆ. ನೀವು ಮೀನು ಹಿಡಿಯುವ ದಾರವನ್ನು ಎಲ್ಲಿ ಸಿಕ್ಕಿಸಬೇಕೋ ಅಲ್ಲಿಗೆ ಬಾಣವನ್ನು ಎಳೆಯಿರಿ. ಸರಿಯಾಗಿ ಹೊಂದಾಣಿಕೆ ಮಾಡಿ ಮೀನು ಹಿಡಿಯುವವನು ಅತ್ಯುತ್ತಮ ಮೀನುಗಾರನಾಗುವನು.

$(91 - 31) : 6$


$(73 - 23) : 10$

$(95 + 5) : 25$

$(17 + 53) : 10$

$(45 \cdot 2) : 10$

$(96 : 3) : 4$



ಯುವಕ ಫಕೀರನ ಒಗಟುಗಳು

103 **ಒಗಟು 1:** 2 ರಿಂದ 10 ರವರೆಗಿನ ಯಾವುದೇ ಸಂಖ್ಯೆಯನ್ನು ತೆಗೆದುಕೊಳ್ಳಿ. ಅದನ್ನು 2 ರಿಂದ ಗುಣಿಸಿ, ಅನಂತರ ಪನಃ 5 ರಿಂದ ಗುಣಿಸಿ. ಈ ಸಂಖ್ಯೆಯನ್ನು 10 ರಿಂದ ಭಾಗಿಸಿ 2 ಅನ್ನು ಕಳೆಯಿರಿ. ಈಗ ನಾನು ನಿಮಗೆ ಉತ್ತರದಿಂದ ಮೂಲ ಸಂಖ್ಯೆಯನ್ನು ಹೇಳಬಲ್ಲೆ. ಉತ್ತರ 8 ಆಗಿದ್ದರೆ, ಮೂಲ ಸಂಖ್ಯೆ 10 ಆಗಿರುತ್ತದೆ; ಉತ್ತರ 7 ಆಗಿದ್ದರೆ, ಸಂಖ್ಯೆ 9 ಆಗಿರುತ್ತದೆ; ಉತ್ತರ 6 ಆಗಿದ್ದರೆ, ಸಂಖ್ಯೆ 8 ಆಗಿರುತ್ತದೆ, ಇತ್ಯಾದಿ.

ಒಗಟು 2: ಒಂದು ಸರಳ ಸಂಖ್ಯೆಯನ್ನು ತೆಗೆದುಕೊಂಡು, ಅದನ್ನು ಮೊದಲು 3 ರಿಂದ ಗುಣಿಸಿ, ನಂತರ 2 ರಿಂದ ಗುಣಿಸಿ, ಫಲಿತಾಂಶವನ್ನು 6 ರಿಂದ ಭಾಗಿಸಿ ಮತ್ತು ನಿಮ್ಮಲ್ಲಿರುವ ಸಂಖ್ಯೆಗೆ 5 ಅನ್ನು ಸೇರಿಸಿ. ಉತ್ತರದಿಂದ ನಾನು ಮೂಲ ಸಂಖ್ಯೆಯನ್ನು ಹೇಳಬಲ್ಲೆ. ಉತ್ತರ 6 ಆಗಿದ್ದರೆ, ಮೂಲ ಸಂಖ್ಯೆ 1 ಆಗಿರುತ್ತದೆ; ಉತ್ತರ 7 ಆಗಿದ್ದರೆ, ಸಂಖ್ಯೆ 8 ಆಗಿರುತ್ತದೆ; ಉತ್ತರ 8 ಆಗಿದ್ದರೆ, ಸಂಖ್ಯೆ 3 ಆಗಿರುತ್ತದೆ ಇತ್ಯಾದಿ.

ಫಕೀರನು ಮೂಲ ಸಂಖ್ಯೆಗಳನ್ನು ಹೇಗೆ ಊಹಿಸುತ್ತಾನೆ? ತಿಳಿಯಲು ಪ್ರಯತ್ನಿಸಿ.

104

ಗಣಿತ ಫುಟ್ಬಾಲ್

ನೀವು 'ಗಣಿತ ಫುಟ್ಬಾಲ್' ಆಡುತ್ತಿದ್ದೀರಿ. ಚೆಂಡಿನ ಹಾರಾಟದ ದಿಕ್ಕನ್ನು ಉಕ್ತಿಯಲ್ಲಿ ಕೋಡ್ ಮೂಲಕ ನೀಡಲಾಗಿದೆ. ಅದನ್ನು ಲೆಕ್ಕ ಹಾಕಿ. ಪ್ರತಿ ಸರಿಯಾದ ಲೆಕ್ಕಾಚಾರಕ್ಕೆ ನಿಮಗೆ 1 ಅಂಕ ನೀಡಲಾಗುತ್ತದೆ ಮತ್ತು ಲೆಕ್ಕ ತಪ್ಪಾದರೆ ನಿಮ್ಮ ಅಂಕಗಳಿಂದ 2 ಅಂಕಗಳನ್ನು ಹಿಂತೆಗೆದುಕೊಳ್ಳಲಾಗುತ್ತದೆ.
ನೀವು ಎಷ್ಟು ಅಂಕಗಳನ್ನು ಪಡೆಯಬಹುದು ಪ್ರಯತ್ನಿಸಿ.

$240 : 3 \cdot 4 =$

$160 : 80 \cdot 12 =$

$210 : 7 \cdot 15 =$

$350 : 50 \cdot 60 =$

$320 : 80 \cdot 70 =$



ಗಣಿತ 'ಹಾಕಿ'

105. ನೀವು "ಗಣಿತದ ಹಾಕಿ" ಆಡುತ್ತಿದ್ದೀರಿ.
ಇಲ್ಲಿ ನೀಡಲಾದ ಉಕ್ತಿಗಳನ್ನು ಗಮನಿಸಿ. ಪ್ರತಿ ಉಕ್ತಿಯ ಸರಿಯಾದ ಉತ್ತರಕ್ಕೆ ಸಮಾನವಾದ ಅಂಕಗಳ ನೀವು ಪಡೆಯುತ್ತೀರಿ. ಈ ಆಟದಲ್ಲಿ ನೀವು ಎಷ್ಟು ಅಂಕಗಳನ್ನು ಪಡೆದಿದ್ದೀರಿ ಎಂದು ಎಣಿಸಿ.


$270 \cdot 2 + 30 =$

$640 : 80 + 58 =$

$650 : 5 + 70 =$


$220 : 11 - 10 =$

$350 : 5 - 30 =$



ಗಣಿತ ಚಕ್ರವ್ಯೂಹ "ಕ್ಯಾಚ್!"

106*. ಒಂದು ಬೆಕ್ಕು ಮತ್ತು ಇಲಿ ಚಕ್ರವ್ಯೂಹದಲ್ಲಿ ಓಡುತ್ತಾ, ಲೆಕ್ಕಾಚಾರಗಳಲ್ಲಿ ಸ್ಪರ್ಧಿಸುತ್ತಿವೆ. ಬೆಕ್ಕು 4 ಗುಣಾಕಾರದ ವಿವಿಧ ಉಕ್ತಿಗಳನ್ನು ಪರಿಗಣಿಸಿ ಫಲಿತಾಂಶಗಳನ್ನು ಪಡೆದಿದೆ. ಇದೇ ರೀತಿಯ ಚಟುವಟಿಕೆಯನ್ನು ವಿಭಿನ್ನ ಉಕ್ತಿಗಳನ್ನು ಹೊಂದಿಸಿ ಒಟ್ಟು 6 ಬಾರಿ ಮಾಡಲು ಅದಕ್ಕೆ 10 ನಿಮಿಷಗಳು ಬೇಕಾಯಿತು, ಪ್ರತಿ ಬಾರಿಯೂ 100 ರ ಮೊತ್ತವನ್ನು ಪಡೆದಿದೆ. ಅದೇ ಚಟುವಟಿಕೆಯನ್ನು ಮಾಡಲು ಇಲಿಯು 15 ನಿಮಿಷಗಳನ್ನು ತೆಗೆದುಕೊಂಡಿತು.100 ರ ಮೊತ್ತ ಪಡೆಯುವಂತೆ ಈ ಚಕ್ರವ್ಯೂಹದಲ್ಲಿ ನೀವು ಎಷ್ಟು ಚಲನೆಗಳನ್ನು ಕಂಡುಕೊಂಡಿದ್ದೀರಿ ಮತ್ತು ಅದು ನಿಮಗೆ ಎಷ್ಟು ಸಮಯ ತೆಗೆದುಕೊಂಡಿತು?



ಒಂದು ತಮಾಷೆಯ ಚೌಕ

107* ಖಾಲಿ ಚೌಕಗಳಲ್ಲಿ ಸಂಖ್ಯೆಗಳನ್ನು ಹಾಕಿ. ಪ್ರತಿ ಸಾಲಿನಲ್ಲಿರುವ ಮತ್ತು ಪ್ರತಿ ಕಾಲಮ್‌ನಲ್ಲಿರುವ ಸಂಖ್ಯೆಗಳನ್ನು ಗುಣಿಸಿ. ನೀವು ಸರಿಯಾದ ಸಂಖ್ಯೆಗಳನ್ನು ಆರಿಸಿದ್ದರೆ, ಗುಣಾಕಾರದ ಫಲಿತಾಂಶಗಳು ಸಮವಾಗಿರಬೇಕು. ಫಲಿತಾಂಶವನ್ನು ಬಣ್ಣದ ಕೋಶದಲ್ಲಿ ಬರೆಯಿರಿ.



ಸಮಸ್ಯೆಗಳಿಗೆ ಉತ್ತರಗಳು

p.12 **(28)**: ಹುಡುಗ ಯೋಚಿಸಿದ ಸಂಖ್ಯೆ 4. ಸಂಖ್ಯೆಯನ್ನು ಊಹಿಸಲು ನೀವು 11 ರಿಂದ 3 ಅನ್ನು ಕಳೆಯಬೇಕು ಮತ್ತು ಫಲಿತಾಂಶವನ್ನು 2 ರಿಂದ ಭಾಗಿಸಬೇಕು.

p.15 **(35)**: ಪ್ರತಿಯೊಬ್ಬ ಕುದುರೆ ಸವಾರನು 30 ಕಿ.ಮೀ. ಕ್ರಮಿಸಿದನು.

p.16 **(40)**: 11 ಪರಿಹಾರಗಳು ಇರಬಹುದು:

47 + 17 + 13 + 23 = 100
47 + 17 + 16 + 20 = 100
47 + 25 + 17 + 11 = 100
27 + 31 + 17 + 25 = 100
27 + 31 + 19 + 23 = 100
27 + 18 + 32 + 23 = 100
27 + 33 + 17 + 23 = 100
29 + 31 + 17 + 23 = 100
29 + 33 + 13 + 25 = 100
35 + 25 + 17 + 23 = 100
18 + 25 + 32 + 25 = 100

p.17 **(41)**: 96 ತಾಳೆ ಮರಗಳು ಮತ್ತು ಚೆಸ್ಟ್ ನಟ್‌ಗಳು.

(42): 

(43): ನಿಮ್ಮ ಸ್ನೇಹಿತ ಹೇಳಿದ ಸಂಖ್ಯೆಯನ್ನು 2 ರಿಂದ ಭಾಗಿಸಿ, ಫಲಿತಾಂಶದಿಂದ 1 ಅನ್ನು ಕಳೆಯಿರಿ ಮತ್ತು ಕ್ಯಾಲೆಂಡರ್ ಸಹಾಯದಿಂದ ಅವನು ಜನಿಸಿದ ತಿಂಗಳು ಹೇಳಿ.

p.18 **(44)**: 60 ಮಕ್ಕಳು.

(45): 54 ಕಾಲುಗಳು.

(46): 4 ಜನರು

p.19 (47): 20 ಕಿ.ಮೀ.

(49): ಕುಟುಂಬದಲ್ಲಿ 3 ಪುರುಷರು: ಅಜ್ಜ, ತಂದೆ ಮತ್ತು ಮಗ.

p.20 (50): ಎರಡನೇ ಮತ್ತು ಮೂರನೇ ಬುಟ್ಟಿಗಳಲ್ಲಿ ತಲಾ 20 ತೆಂಗಿನಕಾಯಿಗಳಿದ್ದವು.

(51): 18 ನೋಟ್‌ಬುಕ್‌ಗಳು.

p.21 (52): 6 ಪರಿಹಾರಗಳು ಇರಬಹುದು:

$$20 \cdot 4 + 20 = 100$$
$$25 \cdot 1 \cdot 4 = 100$$
$$25 \cdot 2 \cdot 2 = 100$$
$$5 \cdot 2 \cdot 10 = 100$$
$$(4+1) \cdot 20 = 100$$
$$(5-1) \cdot 25 = 100$$

(53): 18 ಆನೆಗಳು.

(55): 

p.22 (56): 21 ಫ್ಲಾಟ್-ವ್ಯಾಗನ್‌ಗಳು.

(57): ನಿಮ್ಮ ಸ್ನೇಹಿತನ ಮನೆಯ ಸಂಖ್ಯೆಯನ್ನು ತಿಳಿಯಲು ಅವನು ಹೇಳಿದ ಸಂಖ್ಯೆಯಿಂದ ನೀವು 3 ಅನ್ನು ಕಳೆಯಬೇಕು.

(58): $2 \cdot 5 + 2 \cdot 5 = 20$

p.23 (60): ನಿಮ್ಮ ಸ್ನೇಹಿತನ ಸಂಖ್ಯೆಯನ್ನು ಊಹಿಸಲು ನೀವು ಫಲಿತಾಂಶವನ್ನು 3 ರಿಂದ ಭಾಗಿಸಬೇಕು.

(61): 2 ಕಿತ್ತಲೆಹಣ್ಣುಗಳು.

p.24 (62): ಹುಡುಗರು ದೋಣಿಯನ್ನು ನದಿಯ ಇನ್ನೊಂದು ದಡಕ್ಕೆ ತೆಗೆದುಕೊಂಡು ಹೋಗುತ್ತಾರೆ. ಒಬ್ಬ ಹುಡುಗ ದೋಣಿಯಿಂದ ಇಳಿಯುತ್ತಾನೆ, ಇನ್ನೊಬ್ಬನು ದೋಣಿಯನ್ನು ಅಂಚೆಯವನ ಬಳಿಗೆ ತೆಗೆದುಕೊಂಡು ಹೋಗಿ ಅವನಿಗೆ ದೋಣಿಯನ್ನು ಕೊಡುತ್ತಾನೆ. ಅಂಚೆಯವನು ದೋಣಿಯಲ್ಲಿ ನದಿಯನ್ನು ದಾಟುತ್ತಾನೆ. ಅನಂತರ ಅವನು ದೋಣಿಯನ್ನು ದಡದಲ್ಲಿ ಉಳಿದಿದ್ದ ಹುಡುಗನಿಗೆ ಕೊಡುತ್ತಾನೆ. ಅನಂತರ ಆ ಹುಡುಗನು ಇನ್ನೊಂದು ದಡಕ್ಕೆ ಸೇರುತ್ತಾನೆ.

(63): ಇನ್ನೊಬ್ಬ ಹುಡುಗಿ ಒಂದು ಮೀಟರ್ ಎತ್ತರದಲ್ಲಿ ಹಾಕಲಾದ ದಾರದ ಮೇಲೆ ಹಾರಬಹುದು ಅಥವಾ ಬೇರೆ ಎತ್ತರದಲ್ಲಿ ಹಾರಬಹುದು.

p.25 (65): 3 ಸಿಹಿತಿಂಡಿಗಳು.

(66): 8 ವರ್ಷಗಳು.

(67): $2+2=4;\ 2 \cdot 2 = 4$

(68): ನೀವು ಒಂದು ಬದಿಯ ಪೆನ್ಸಿಲ್ ಅನ್ನು ಇನ್ನೊಂದು ಬದಿಯ ಪೆನ್ಸಿಲ್‌ಗೆ ಬದಲಾಯಿಸಬೇಕು.

p.26 (69): 1344 ಗುಲಾಬಿಗಳು.

(70): IV

(71): VIII

p.30 (77): 15 ಮತ್ತು 10 ವೃತ್ತಗಳು.

(78): 4 ತ್ರಿಕೋನಗಳು.

(79): 4 ಸೆಂ.ಮೀ.

p.31 (81): 5 ಚತುರ್ಭುಜಗಳು.

(82): 18 ದೋಣಿಗಳು.

p.32 (83): 35 ಸೈಕಲ್‌ಗಳು.

(84): 30 ಸೆಂ.ಮೀ.

(85): 50 ಹಣ್ಣಿನ ಮರಗಳು.

p.33 (87): 51 ಚಿಟ್ಟೆಗಳು.

(88): $25 \cdot 8 - 75 = 125$
$70 \cdot 2 - 15 = 125$
$60 \cdot 2 + 5 = 125$
$70 \cdot 3 - 85 = 125$. Etc.

p.34 (89): 30 ನಿಮಿಷಗಳು; 15 ನಿಮಿಷಗಳು; 5 ನಿಮಿಷಗಳು.

(90): 9.15 ಕ್ಕೆ; 9.25 ಕ್ಕೆ; 10.10 ಕ್ಕೆ.

p.35 (91): ಮುಂದಿನ ಚಲನಚಿತ್ರ 11:15 ಕ್ಕೆ ಆರಂಭವಾಗುತ್ತದೆ.

(92): 

(93): ಅವುಗಳ ಹೆಸರುಗಳು: ಜನವರಿ, ಫೆಬ್ರವರಿ, ಮಾರ್ಚ್, ಏಪ್ರಿಲ್, ಮೇ, ಜೂನ್, ಜುಲೈ, ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್, ಡಿಸೆಂಬರ್.

6 ಪರಿಹಾರಗಳು ಇರಬಹುದು:

p.43 (106):

$$3 \cdot 2 + 8 : 8 + 6 \cdot 5 + 0 \cdot 7 = 100$$
$$7 \cdot 3 + 7 : 7 + 6 \cdot 5 + 5 \cdot 0 = 100$$
$$10 \cdot 6 + 4 \cdot 4 + 3 \cdot 2 + 9 \cdot 2 = 100$$
$$4 \cdot 4 + 8 \cdot 8 + 5 \cdot 4 + 0 \cdot 7 = 100$$
$$8 \cdot 8 + 6 \cdot 6 + 0 \cdot 7 + 5 \cdot 0 = 100$$
$$8 \cdot 8 + 4 \cdot 5 + 4 \cdot 4 + 5 \cdot 0 = 100$$

p.44 (107):

3	2	20
4	5	6
10	12	120



